ಕಡೆಗೆ ಹರಡುತ್ತಾ ವಿಧ ವಿಧವಾದ ಭಯಗಳು ಎಳೆ ಎಳೆಯಾಗಿ ಅದೃಶ್ಯ ದಾರಗಳಾಗಿ ಹೆಣೆದುಕೊಂಡು ನಡೆಯಲಿರುವುದು ಅರಿವಾದಂತೆ, ನಿಕ್ಕರ್‌ಗಳು, ಲಾಠಿಗಳು, ಕೇಸರಿ ಬಾವುಟಗಳು... ಭಯ ಭೀತಗೊಂಡ ಸಲೀಮ್. ಅವನಿಗೆ ಭಯ ಸಾವಿನ ಬಣ್ಣದ ಮುಖವಾಡ ಹಾಕಿಕೊಂಡು ಆವರಿಸಿದಂತಾಗಿತ್ತು. ಉದ್ದನೆಯ ನೀಲಗಿರಿ ಮರಗಳ ನಡುವೆ ಸಲೀಮ್ ಸಾವಿನ ಭಯದಿಂದ ಓಡುತ್ತಿದ್ದ. ಯುನಿವರ್ಸಿಟಿ ಕ್ಯಾಂಪಸ್ ಕೊನೆಗೆ ಬಂದ. ಅಮೆರಿಕನ್ ಲೈಬ್ರರಿ ಮುಂದೆ ಕ್ಷಣಹೊತ್ತು ನಿಂತ. ಎದುರಿಗೆ ವಿಶಾಲವಾದ ರಸ್ತೆ. ಮರಗಳ ಕೆಳಗೆ ಕ್ರಿಕೆಟ್ ಆಡಲು ಬಂದಿದ್ದ ಹುಡುಗರು. ಆರೋಗ್ಯದಿಂದ, ನಿರ್ಭಯದಿಂದ, ಹರಟೆಹೊಡೆಯುತ್ತಿದ್ದರು. ಅವರು ಮಳೆ ನಿಲ್ಲುವುದನ್ನು ಕಾಯುತ್ತಿದ್ದರು. ವಿಕೆಟ್‌ಗಳು, ಬ್ಯಾಟು ಅಸಹಾಯಕತೆಯಿಂದ ಮಳೆಯಲ್ಲಿ ತೊಯ್ಯುತ್ತಿದ್ದವು. ಸಲೀಮನಿಗೆ ವಿಚಿತ್ರವಾದ ಯೋಚನೆ ಬಂತು. ಆ ಕ್ಷಣದಲ್ಲಿ ಅದೊಂದು ಅವಾಸ್ತವಿಕ ಮತ್ತು ಅಸಂಗತ ಅನಿಸಿದರೂ ಆ ಆಲೋಚನೆ ಆಮ್ಲಜನಕದಂತೆ, ಶಕ್ತಿಯುತವಾಗಿ ಅವನ ಮೆದುಳನ್ನೆಲ್ಲಾ ಆಕ್ರಮಿಸಿಕೊಂಡಿತು. ನಾನ್ಸೆನ್ಸ್, ನಾನ್ಸೆನ್ಸ್ ಎಂದು ಎರಡು ಸಲ ಗೊಣಗಿಕೊಂಡ.ಉಹುಂ ಇದೇ ಸರಿಯಂದು ಮನಸ್ಸಿಗೆ ಸಮಾಧಾನ ಹೇಳಿಕೊಂಡ. ಇದೊಂದು ಅದ್ಭುತವಾದ ಎಸ್ಕೇಪ್ ಎಂದುಕೊಂಡ.

ಆ ಹುಡುಗರ ಹತ್ತಿರ ಹೋಗಿ ಗಂಭೀರವಾಗಿ ಅವರ ಮುಖ ನೋಡಿ, "ಹಲೋ" ಎಂದ. "ಹಲೋ ಅಂಕಲ್" ಎಂದರು ಅವರು ಕೋರಸ್‌ನಂತೆ. ಮುಖವನ್ನು ಗಂಭೀರವಾಗಿರಿಸಿ, "ನನಗೊಂದು ಸಹಾಯ ಮಾಡ್ತೀರಾ?" ಎಂದು ಕ್ಷಣ ಹೊತ್ತು ನಿಂತು, "ಸಿಕ್ಸರ್ ಹೊಡೆದಷ್ಟು ವೇಗವಾಗಿ, ಬಲವಾಗಿ ನನ್ನ ಮುಖದ ಮೇಲೆ ಗುದ್ದಬೇಕು. ಮೂಗು ಒಡೆದು ಮುಖ ಬಾತುಕೊಳ್ಳುವಂತೆ..." ಎಂದ. 'ಜೋಕ್ ಮಾಡ್ತಿದ್ದೀರಾ?' ಎಂಬಂತೆ ನೋಡಿದರು ಅವರೆಲ್ಲಾ. "ಐವತ್ತು ರೂಪಾಯಿ ಕೊಡ್ತೇನೆ" ಎಂದ ಸಲೀಮ್, "ಹೋಗಲಿ ನೂರು ರೂಪಾಯಿ ಕೊಡ್ತೇನೆ" ಎಂದ. "ನೀವೇ ಹೊಡೆದುಕೊಳ್ಳಬಹುದಲ್ಲ" ಎಂದನೊಬ್ಬ ಹುಡುಗ. "ಹೊಡೆದುಕೊಳ್ಳಬಹುದು, ಆದರೆ ಅಷ್ಟೊಂದು ಜೋರಾಗಿ ಹೊಡೆದುಕೊಳ್ಳೋದು... ಕಷ್ಟ..." ಎಂದು, "ಹೋಗಲಿ ಎರಡು ನೂರು ರೂಪಾಯಿಗಳನ್ನು ಕೊಡ್ತೇನೆ" ಎಂದ. ಜೇಬಿನೊಳಗಿಂದ ಹಣವನ್ನು ಹೊರತೆಗೆದ.

ಅವರೊಳಗಿಂದ ಒಬ್ಬ ನಂಬಲಾಗದ ಮುಖದಿಂದ ಮುಂದಕ್ಕೆ ಬಂದು ನೋಟುಗಳನ್ನು ತೆಗೆದುಕೊಂಡು, ಸ್ವಲ್ಪ ಹೊತ್ತು ತಡವರಿಸಿ, ಕೈಯನ್ನು ಬಿಗಿದು ಮುಷ್ಟಿಯಿಂದ ಗುದ್ದಲು ಸಿದ್ಧವಾದ. ಸಲೀಮ್ ಕಣ್ಮುಚ್ಚಿಕೊಂಡ. ಮುಷ್ಟಿ ದೊಡ್ಡ ಸದ್ದಿನೊಂದಿಗೆ ಮುಖವನ್ನು ಘರ್ಷಿಸಿತು. ಮರವೊಂದನ್ನು ಬೇರು ಸಮೇತ ಕಿತ್ತಿ ಹಾಕಿದಂಥ ಅನುಭವ. ಮೂಗಿನೊಳಗಿಂದ ಬುಳಬುಳನೇ ರಕ್ತ ಕೋಡಿಯಾಗಿ ಹರಿಯತೊಡಗಿತು. ಮುಂದಿನ ಎರಡು ಹಲ್ಲು ಉದುರಿ ಬಿದ್ದವು. ಕ್ಷಣ ಹೊತ್ತು ದೇಹ ಜೋಲಿ ಹೊಡೆದಂತಾಗಿ ಮರವೊಂದನ್ನು ಆಸರೆಯನ್ನಾಗಿ ಮಾಡಿಕೊಂಡು – 'ಥ್ಯಾಂಕ್ಸ್' ಎಂದು ಹೇಳುತ್ತಾ ಎದುರಿಗಿದ್ದ ಕಾಡಿನಂತಿದ್ದ ಮರಗಳ ಸಮೂಹದೊಳಕ್ಕೆ ಓಡಿದ. ಆ ಹುಡುಗರ ಮುಖಗಳು ಕನಸನೊಂದನ್ನು ಅನುಭವಿಸುತ್ತಿರುವಂತೆ ಕಾಣತೊಡಗಿದವು.

ಆ ದಿನ ಸಾಯಂಕಾಲ ಸಲೀಮ್ ಸಲೂನ್‌ಗೆ ಹೋಗಿ ಹೇರ್‌ಸ್ಟೈಲ್ ಬದಲಿಸಿಕೊಂಡ. ಮೀಸೆ ತೆಗೆಸಿದ. ಸ್ವಲ್ಪ ಸೊಟ್ಟಗಾದ ಮೂಗು, ತುಂಡಾದ ಹಲ್ಲು. ಹೊಸ ಮನುಷ್ಯನಂತೆ ಕಾಣತೊಡಗಿದ್ದ. 'ಇದೆಲ್ಲಾ ಬೇಕಾ?' ಎಂದು ಆ ದಿನ ರಾತ್ರಿ ತುಂಬಾ ಹೊತ್ತು ಯೋಚಿಸಿದ.